ನೂರರ ಹಲವು ನೋಟುಗಳು, ಐವತ್ತರ, ಇಪ್ಪತ್ತರ, ಹತ್ತರ ಹಾಗೇ ಐದರ ಕೆಲವು ನೋಟುಗಳೂ ಆ ಕಟ್ಟಿನಲ್ಲಿದ್ದವು. ಬಹಳ ಕಾಲದಿಂದ ಕೂಡಿಟ್ಟ ಹಾಗೆ ನೋಟುಗಳೆಲ್ಲ ಮಸುಕು ಮಸುಕಾಗಿದ್ದವು. ಅಂಗೈಗಳ ಮೇಲೆ ಮೂಡಿದಂತೆಯೇ ಈ ನೋಟುಗಳ ಮೇಲೂ ರೇಖೆಗಳು ಮೂಡಿದ್ದವು, ಅಂಚು ಚೂಪಾಗಿರದೇ ಚೂರೇ ಚೂರು ಸವೆದಿತ್ತು.

"ಇಷ್ಟೊಂದು ದುಡ್ಡು ನಾನ್ಯಾವತ್ತೂ ನೋಡಿಲ್ಲ. ಪಿಚ್ಚರಿನ್ಯಾಗ ತೋರಸ್ತಾರಲ್ಲ, ಹಂಗದ."

"ನನಗೂ ಹಾಗೆಯೇ ಅನ್ನಿಸಿತು. ಎಷ್ಟು ಉಂಟು ಗೊತ್ತೇನು? ನಿನ್ನೆ ಅಮ್ಮ ಸ್ನಾನಕ್ಕೆ ಹೋದಾಗ ಎಣಿಸಿದ್ದೆ. ಸರಿಯಾಗಿ ಹತ್ತು ಸಾವಿರ!"

ಹತ್ತು ಸಾವಿರದ ಹೆಸರು ಹೇಳಿ ನನಗಂತೂ ಎದೆ ಡವಗುಟ್ಟಿತು. ಹತ್ತು ಸಾವಿರ ಅಂದರೆ ಎಷ್ಟೊಂದು ದುಡ್ಡು! ಹಾಗೆಲ್ಲ ಎಂದೂ ಅಷ್ಟನ್ನು ನೋಡಿಯೂ ಗೊತ್ತಿರಲಿಲ್ಲ. ಕೈಯಲ್ಲಿದ್ದ ಕಟ್ಟು ಮೊತ್ತ ಕೇಳಿದೊಡನೆ ಭಾರವಾಗಿ ಸದಾನ ಕೈಯಲ್ಲಿ ಕೊಟ್ಟುಬಿಟ್ಟೆ. ಅವನದನ್ನು ಮರಳಿ ಎಲ್ಲಿತ್ತೋ ಅಲ್ಲಿಟ್ಟುಬಿಟ್ಟ. ಹಿತ್ತಿಲಲ್ಲಿ ಮಂಗ ಬಂದ ಸದ್ದು ಕೇಳಿ ನಾವು ತಕ್ಷಣ ಹೊರಗೋಡಿದೆವು.

ಅದೇ ಸಂಜೆ ಅಜ್ಜಿಯ ಹತ್ತಿರ ತಲೆ ಬಾಚಿಸಿಕೊಳ್ಳುತ್ತಿದ್ದಾಗ ಲಹರಿಯಲ್ಲೆಂಬಂತೆ ಆ ವಿಷಯ ನನ್ನ ಬಾಯಲ್ಲಿ ಬಂತು.

"ಅಜ್ಜಿ ನೀನು ಎಷ್ಟು ರೊಕ್ಕ ನೋಡಿ?"

"ಎಂಥದೇ ಹಂಗಂದ್ರೆ ಮಗಾ?"

"ಅಂದ್ರ ಅಶೋಕ ಮಾಮನ ಪಗಾರ ಎಷ್ಟು?"

"ಊಂ, ಹಂಗ್ ಕೇಳೂಕಿಲ್ಲ ಸಣ್ಣವರೆಲ್ಲ... ಎಷ್ಟಿರೂದು?... ಇರೂದು ಮೂರು, ಮೂರೂವರೆ ಸಾವ್ರ."

